9	ಪಶುಚಿಕಿತ್ಸಾಲಯ, ಬೈರನಾಯಕನಹಳ್ಳಿ	2
10	ಕೃ.ಗ.ಕೇಂದ್ರ, ನಿಡವಂದ	1
11	ಕೃ.ಗ.ಕೇಂದ್ರ, ಮರಳಕುಂಟೆ	1
12	ಪಶುಚಿಕಿತ್ಸಾಲಯ, ಕೊಡಿಗೆಹಳ್ಳಿ	1
13	ಪಶುಚಿಕಿತ್ಸಾಲಯ, ನರಸೀಪುರ	1
14	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಬಾಣವಾಡಿ	1
15	ಪಶು ಚಿಕಿತ್ಸಾಲಯ, ಗುಡೇಮಾರನಹಳ್ಳಿ	1
16	ಪಶು ಚಿಕಿತ್ಸಾಲಯ, ಮೋಟಗಾನಹಳ್ಳಿ	2
	ಒಟ್ಟು	**19**

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯಕೀಯ
ಸೇವೆಗಳ ಇಲಾಖೆ

ಅಕ್ರಮ ಮರಳು ಸಾಗಾಣಿಕೆ ತಪಾಸಣೆ

37(111); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ಅಕ್ರಮ ಮರಳು ಸಾಗಾಣಿಕೆ ಲಾರಿಗಳನ್ನು ತಪಾಸಣೆ ಮಾಡಲು ಪೊಲೀಸ್ ಇಲಾಖೆಗೆ ಅನುಮತಿ ನೀಡಲಾಗಿದೆಯೇ (ವಿವರ ನೀಡುವುದು).

ಆ) ಹಾಗಿದ್ದಲ್ಲಿ, ಎನ್‌ಹೆಚ್–4 ರಲ್ಲಿ ದಿನನಿತ್ಯ ಸಂಚರಿಸುವ ಮರಳು ಲಾರಿಗಳ ತಪಾಸಣೆಯನ್ನು ಕ್ರಮಬದ್ಧವಾಗಿ ಮಾಡುತ್ತಿದ್ದಾರೆಯೇ?

ಇ) ನೆಲಮಂಗಲ ವ್ಯಾಪ್ತಿಯ 4 ಠಾಣೆಗಳಿಂದ ಕಳೆದ 2013–14, 2014–15ನೇ ಸಾಲಿನಲ್ಲಿ ತಪಾಸಣೆ ಮಾಡಿ ದಂಡ ವಸೂಲಾತಿ ಮಾಡಲು ತಾಲ್ಲೂಕು ದಂಡಾಧಿಕಾರಿಗಳಿಗೆ ಕಳುಹಿಸಿರುವ ಮರಳು ಲಾರಿಗಳ

ಸಂಖ್ಯೆ ಎಷ್ಟು? ಈ ಅಕ್ರಮ ಲಾರಿಗಳಿಂದ ವಸೂಲಿ ಮಾಡಲಾದ ಹಣವೆಷ್ಟು (ವಿವರ ನೀಡುವುದು).

ಈ) ಈ ಠಾಣೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತುಂಬಾ ಅವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಸರ್ಕಾರದ ಅಧಿಸೂಚನೆ ಸಂ: ಸಿಬಿ/21/ಎಂಎಂಎಸ್(2)/2014, ದಿ: 21-01-2014ರಲ್ಲಿ ಗಣಿಗಾರಿಕೆ ಮತ್ತು ಖನಿಜ ಸಾಗಾಣಿಕೆ ನಿಯಂತ್ರಿಸಲು ಎಂಎಂ (ಆರ್ ಮತ್ತು ಡಿ) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು – 1994ರ ಅನ್ವಯ ಪೊಲೀಸ್ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ.

ಆ) ಎನ್‌ಹೆಚ್-4 ರಸ್ತೆಯಲ್ಲಿ ಬರುವ ಕರ್ನಾಟಕದ ಜಿಲ್ಲೆಗಳಲ್ಲಿ ಮರಳು ಲಾರಿಗಳ ತಪಾಸಣೆಯನ್ನು ಕ್ರಮಬದ್ಧವಾಗಿ ಮಾಡಲಾಗುತ್ತಿದ್ದು, ಅಕ್ರಮ ಮರಳು ಸಾಗಿಸಿದವರ ವಿರುದ್ಧ ಕಾನೂನಿನಡಿ ಕ್ರಮ ಜರುಗಿಸಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಎನ್.ಹೆಚ್-4 ರಸ್ತೆಯಲ್ಲಿ ಸಂಚರಿಸುವ ಅಕ್ರಮ ಮರಳು ದಂಧೆ ವಾಹನಗಳನ್ನು ತಪಾಸಣೆ ಮಾಡುವ ಸಲುವಾಗಿ ಕ್ಯಾತ್ಸಂದ್ರ ಜಾಸ್‌ಟೋಲ್‌ಗೇಟ್ ಬಳಿ ಹೊಸದಾಗಿ ಪ್ರತಿದಿನ ಸರದಿಯ ಪ್ರಕಾರ ಪಿ.ಎಸ್.ಐ., ಮತ್ತು ಸಿಬ್ಬಂದಿಗಳನ್ನು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ನೇಮಕ ಮಾಡಲಾಗಿರುತ್ತದೆ. ಇದರ ಜೊತೆಗೆ ಎನ್.ಹೆಚ್-4 ರಸ್ತೆಯಲ್ಲಿ ಬರುವ ತಾವರೆಕೆರೆ, ಶಿರಾ, ಕಳ್ಳಂಬೆಳ್ಳ, ಕೋರ, ತುಮಕೂರು ಗ್ರಾಮಾಂತರ ಮತ್ತು ಕ್ಯಾತ್ಸಂದ್ರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಯಾ ಪೊಲೀಸ್ ಠಾಣಾ ಅಧಿಕಾರಿಗಳು ಅಕ್ರಮ

ಮರಳು ದಂಧೆ ವಾಹನಗಳನ್ನು ತಪಾಸಣೆ ಮಾಡಿ ಸೂಕ್ತ ಕಾನೂನು ರೀತಿ ಕ್ರಮಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.

ಇ) ನೆಲಮಂಗಲ ವ್ಯಾಪ್ತಿಯಲ್ಲಿ 4 ಠಾಣೆಗಳಿಂದ ಕಳೆದ 2013–14, 2014–15ನೇ ಸಾಲಿನಲ್ಲಿ ತಪಾಸಣೆ ಮಾಡಿ ದಂಡ ವಸೂಲಾತಿ ಮಾಡಲು ತಾಲ್ಲೂಕು ದಂಡಾಧಿಕಾರಿಗಳಿಗೆ ಕಳುಹಿಸಿರುವ ಮರಳು ಲಾರಿಗಳ ಸಂಖ್ಯೆಯ ವಿವರ ಹಾಗೂ ಈ ಅಕ್ರಮ ಲಾರಿಗಳಿಂದ ವಸೂಲಿ ಮಾಡಲಾದ ಹಣದ ವಿವರಗಳನ್ನು ಅನುಬಂಧ–ಅ ದಲ್ಲಿ ನೀಡಲಾಗಿದೆ.

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಅನುಬಂಧ–ಅ

2013–14 ಹಾಗೂ 2014–15ನೇ ಸಾಲಿನಲ್ಲಿ ನೆಲಮಂಗಲ ವ್ಯಾಪ್ತಿಯ 4 ಠಾಣೆಗಳಲ್ಲಿ ದಾಖಲಾದ ಅಕ್ರಮ ಮರಳು ಸಾಗಾಣಿಕೆಯ ವಿವರ

2013–14ನೇ ಸಾಲಿನ ಮಾಹಿತಿ

ಕ್ರ. ಸಂ	ಪೊಲೀಸ್ ಠಾಣೆಯ ಹೆಸರು	ವಶಕ್ಕೆ ಪಡೆದ ಲಾರಿಗಳ ಸಂಖ್ಯೆ	ತಾಲ್ಲೂಕು ದಂಡಾಧಿಕಾರಿಯವರಲ್ಲಿ ಕಳುಹಿಸಿದ ಲಾರಿ ಸಂಖ್ಯೆ	ತಾಲ್ಲೂಕು ದಂಡಾಧಿಕಾರಿಗಳು ವಿಧಿಸಿದ ದಂಡ ರೂ
1	ನೆಲಮಂಗಲ ಟೌನ್	26	26	2,60,000
2	ತ್ಯಾಮಗೊಂಡ್ಲು	7	7	6,50,000
3	ಡಾಬಸ್‌ಪೇಟೆ	12	12	65,000
4	ನೆಲಮಂಗಲ ಗ್ರಾಮಾಂತರ	2	2	20,000

2014–15ನೇ ಸಾಲಿನ ಮಾಹಿತಿ

ಕ್ರ ಸಂ	ಪೊಲೀಸ್ ಠಾಣೆಯ ಹೆಸರು	ವಶಕ್ಕೆ ಪಡೆದ ಲಾರಿಗಳ ಸಂಖ್ಯೆ	ತಾಲ್ಲೂಕು ದಂಡಾಧಿಕಾರಿಯವರಲ್ಲಿ ಕಳುಹಿಸಿದ ಲಾರಿ ಸಂಖ್ಯೆ	ತಾಲ್ಲೂಕು ದಂಡಾಧಿಕಾರಿಗಳು ವಿಧಿಸಿದ ದಂಡ ರೂ
1	ನೆಲಮಂಗಲ ಟೌನ್	4	4	ವಿಚಾರಣೆಯಲ್ಲಿರುತ್ತದೆ
2	ತ್ಯಾಮಗೊಂಡ್ಲು	5	5	85,000

3	ಡಾಬಸ್‌ಪೇಟೆ	33	33	4,70,000
4	ನೆಲಮಂಗಲ ಗ್ರಾಮಾಂತರ	17	17	1,65,000

ಸಣ್ಣ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿ

38(132); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು.

ಆ) ಈ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು ಮತ್ತು ಖರ್ಚಾಗಿರುವ ಅನುದಾನವೆಷ್ಟು: (ಸಂಪೂರ್ಣ ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಸರ್ಕಾರದಿಂದ ನೇರವಾಗಿ ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದಿಲ್ಲ. ಆದರೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ದಿಮೆದಾರರಿಗೆ ಈ ಕೆಳಕಂಡ ಸೌಲಭ್ಯಗಳು ಹಾಗೂ 2014–19ನೇ ಪ್ರಸ್ತುತ ಜಾರಿಯಲ್ಲಿರುವ ಕೈಗಾರಿಕಾ ನೀತಿಯಂತೆ ರಿಯಾಯಿತಿ ಮತ್ತು ಸೌಲಭ್ಯಗಳನ್ನು ಒದಗಿಸಲಾಗುವುದು.

- ಬಂಡವಾಳ ಹೂಡಿಕೆ ಸಹಾಯಧನ, ಮುದ್ರಾಂಕ ಶುಲ್ಕ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ, ಬಡ್ಡಿ ಸಹಾಯಧನ, ವಿದ್ಯುತ್‌ಚ್ಛಕ್ತಿ ಶುಲ್ಕ ವಿನಾಯಿತಿ ಹಾಗೂ ಭೂ ಪರಿವರ್ತನಾ ಶುಲ್ಕ ರಿಯಾಯಿತಿ ಮುಂತಾದವುಗಳನ್ನು ಒದಗಿಸಲಾಗುವುದು.

- ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ 10.00 ಲಕ್ಷಗಳ ಮೊತ್ತದವರೆಗೆ ಬಂಡವಾಳ ಹೂಡಿ, ಸೂಕ್ಷ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ಯುವಕ/ ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳುವಂತೆ ಉತ್ತೇಜಿಸಲು ಕರ್ನಾಟಕ ಸ್ವಯಂ